International Journal of Kannada Research
www.kannadajournal.com

ISSN: 2454–5813
IJKR 2018; 4(1): 17-19
© 2018 IJKR
www.kannadajournal.com
Received: 05-11-2017
Accepted: 06-12-2017

**ಕನಕರಾಯ.ಕೆ.ನಾಯಕ**
ಸಂಶೋಧನಾ ವಿದ್ಯಾರ್ಥಿ, ಕನ್ನಡ, ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**Correspondence**
**ಕನಕರಾಯ.ಕೆ.ನಾಯಕ**
ಸಂಶೋಧನಾ ವಿದ್ಯಾರ್ಥಿ, ಕನ್ನಡ, ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

# ದಳವಾಯಿಯವರ ಜಾತಿ ಮಾಡಬ್ಯಾಡರಿ ಅಧಿಕಾರದೊಳಗ ನಾಟಕದಲ್ಲಿನ ದಲಿತ ಸಂವೇದನೆ

**ಕನಕರಾಯ.ಕೆ.ನಾಯಕ**

ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನಾಟಕ ಸಾಹಿತ್ಯವು ಬಹಳ ಪ್ರಾಚೀನವಾದುದು. ೨೦ನೇ ಶತಮಾನದಲ್ಲಿ ಇದು ತನ್ನದೆ ಪ್ರತಿಷ್ಠಿತೆಯನ್ನು ಪಡೆದುಕೊಂಡಿದೆ. ಈ ಸಾಹಿತ್ಯದಲ್ಲಿ ಕೃಷಿಗೈದ ಕನ್ನಡ ಹಲವಾರು ಖ್ಯಾತ ನಾಮರಾದ ಕುವೆಂಪು, ಬಿ.ಎಂ.ಶ್ರೀ, ಟಿ.ಪಿ.ಕೈಲಾಸಂ, ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರ ಸೇರಿದಂತೆ ಪ್ರಮುಖರು ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಅಂತಹ ಖ್ಯಾತನಾಮರ ಸಾಲಿನಲ್ಲಿ ರಾಜಪ್ಪ ದಳವಾಯಿಯವರು ಒಬ್ಬರು. ಬಂಡಾಯ ಸಾಹಿತ್ಯದ ನೆಲೆಯಲ್ಲಿ ಗುರುತಿಸಿ ಕೊಂಡಿರುವ ಇವರು ರಂಗಭೂಮಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದಾರೆ. ನಾಟಕ ರಚನೆ, ಅಭಿನಯ, ನಿರ್ದೇಶನ ಹಾಗೂ ಪಾಲನೆ ಪೋಷಣೆಯಲ್ಲಿ ಇವರ ಕೊಡುಗೆ ಕನ್ನಡ ನಾಟಕ ಸಾಹಿತ್ಯಕ್ಕೆ ಮೆರುಗು ತರುವಂತಹದ್ದು.

ಸ್ವತಃ ಬಂಡಾಯ ಸಾಹಿತ್ಯದ ಕಟುಬದ್ಧ ಹಿಂಬಾಲಕರಾದ ಇವರು ಈ ಸಮಾಜವನ್ನು ಸಮೀಪದಿಂದ ಗಮನಿಸಿದವರು, ಇಲ್ಲಿಯ ಜಾತಿ, ಮತ, ಧರ್ಮ, ಸಂಸ್ಕೃತಿ, ರಾಜಕೀಯ, ಸಾಮಾಜಿಕ ಹಾಗೂ ದಿನನಿತ್ಯದ ಸಾಮಾಜಿಕ ಸೂಕ್ಷ್ಮ ಘಟನೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವುಗಳಿಗೆ ತಕ್ಕ ಪರ್ಯಾಯಗಳನ್ನು ಕೊಡುವಲ್ಲಿ ತಮ್ಮ ಸಾಹಿತ್ಯದುದ್ದಕ್ಕೂ ಶ್ರಮಿಸಿದ್ದಾರೆ. ಸ್ವತಃ ನಟರು, ನಿರ್ದೇಶಕರು ಆದ ಇವರು ನಾಟಕಗಳ ವಸ್ತು, ವಿಷಯ, ಪಾತ್ರಗಳ ಮುಖಾಂತರ ಈ ಆಧುನಿಕ ಸಮಾಜದ ಪರಿವರ್ತನೆಯಲ್ಲಿ ಹಾದಿ ಕಂಡಿದ್ದಾರೆ.

ಪ್ರಸ್ತುತ ''ಜಾತಿ ಮಾಡ ಬ್ಯಾಡಿರಿ ಅಧಿಕಾರಿದೊಳಗ'' ಎಂಬ ದಳವಾಯಿಯವರ ನಾಟಕದಲ್ಲಿ ದಲಿರ ಮೇಲೆ ನಡೆಯುವಂತ ಅನ್ಯಾಯ, ಅಸಮಾನತೆ, ಶೋಷಣೆಯನ್ನು ಇಲ್ಲಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇದು ಅನಕ್ಷರಸ್ಥರಿಂದ ಕೂಡಿದ ಒಂದು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ್ದಾದರೂ ಪ್ರಸ್ತುತ ರಾಜಕೀಯ ಹಿನ್ನೆಲೆ, ಇಲ್ಲಿ ನಡೆಯುವ ಪಿತೂರಿಗಳು ಸಾಮಾನ್ಯ ಜನರ ಮೇಲೆ ಪರಿಣಾಮ ಬೀರುವಂತದ್ದು, ದಳವಾಯಿಯವರು 'ಜಾತಿ ಮಾಡಬ್ಯಾಡಿರಿ ಅಧಿಕಾರಿದೊಳಗ ಪಂಚಾಯಿತ ಒಳಗ' ಎಂಬ ಹಾಡಿನಿಂದ ಪ್ರಾರಂಭಿಸಿದ್ದಾರೆ. ಇಲ್ಲಿ ಬರುವ ಪಾತ್ರಧಾರಿಗಳು ಅನಕ್ಷರಾಗಿದ್ದರೂ ಸಂವಿಧಾನದ ಆಶಯಗಳನ್ನು ನಿಯಮಗಳನ್ನು ಹಾಗೂ ಮಾನವೀಯತೆಯ ಧರ್ಮವನ್ನು ಪರಿಪಾಲಿಸುವ ರಾಜಣ್ಣ, ಕೆಂಚವ್ವ, ಪೀರಣ್ಣ, ಮಲ್ಲಣ್ಣ, ಭೀಮಕ್ಕ, ಸೇರಿದಂತೆ ಗ್ರಾಮ ಪಂಚಾಯತಿಯ ಚುನಾಯಿತ ಸದಸ್ಯರು ಊರ ಸಾಹುಕಾರ, ಮೇಲ್ಜಾತಿಯ ಮುಖಂಡ ಸಿದ್ಲಿಂಗಪ್ಪನ ಒಳಸಂಚು, ಅಧಿಕಾರದ ವ್ಯಾಮೋಹ, ಜಾತಿಯ ಕೀಳರಿಮೆಯನ್ನು ಪ್ರಬಲವಾಗಿ ಎದುರಿಸುವಲ್ಲಿ ದಳವಾಯಿಯವರ ಪಾತ್ರ ರಚನೆ, ಅವರ ನಿರ್ಧಾರಗಳು ಪ್ರಶಂಸನೀಯವಾದುವು.

ರಾಜಕೀಯ ಮಾಡುವಲ್ಲಿ ಸಮಾಜದ್ರೋಹಿಗಳು, ಕಪಟನಾಟಕ ಸೂತ್ರಧಾರಿಗಳು, ವಂಚಕರು, ಚಾಡಿಕೋರರು ನಿಸ್ಸಿಮರು ಎಂಬ ದೃಷ್ಟಿಯಿಂದ ದಳವಾಯಿಯವರು ಶಂಕ್ರಯ್ಯ ನಂತಹ ಪಾತ್ರವನ್ನು ಸೃಷ್ಟಿಸಿದ್ದಾರೆ. ನಾರದ ಇಲ್ಲದೆ ಯಾವ ಮಹಾಭಾರತ, ರಾಮಾಯಣಗಳು ನಡೆದಿಲ್ಲ. ಹಾಗೆ ಶಂಕ್ರಯ್ಯ ನಂತಹ ಆಧುನಿಕ ನಾರದರು ಬಹಳಷ್ಟು ಇದ್ದಾರೆ ಎಂಬುದು ದಳವಯಿಯವರ ಅಭಿಪ್ರಾಯ ಹಳೆಯದಾದರು ಒಪ್ಪಲೇಬೇಕಾದ ಅನಿವಾರ್ಯತೆ ಇದೆ. ಅಂಬೇಡ್ಕರ ಮತ್ತು ಅವರ ಸಂವಿಧಾನ ಆಧುನಿಕ ಸಮಾಜಕ್ಕೆ ಎಷ್ಟು ಮಹತ್ವವಾದದ್ದು ಎಂಬುದು ಕೆಳಜಾತಿಯವರ ಮೀಸಲಾತಿಯಿಂದಾಗಿ ಈ ನಾಟಕದ ನಾಯಕಿ ಕೆಂಚವ್ವ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗುವುದರಿಂದ ಪ್ರಮುಖವೆನಿಸುತ್ತದೆ. ಇಲ್ಲಿ ಕಥಾ ನಾಯಕಿಯ ಪಾತ್ರ ಅಲ್ಲಲ್ಲಿ ಬಂದರು ಅತ್ಯಂತ್ಯ ಮಹತ್ವವಾದುದ್ದು. ಆಕೆಯ ಸ್ವಾಭಿಮಾನ ಮುಗ್ಧತೆ, ಕರ್ತವ್ಯನಿಷ್ಠೆ, ಧೈರ್ಯ ಹೆಣ್ಣು ರಾಜಕೀಯದಲ್ಲಿಯೂ ಸಹ ಯಶಸ್ವಿಯಾಗಬಲ್ಲಳು ಎಂದು ಧೃಡಪಡಿಸುವಂತಿದೆ.

ಶಂಕ್ರಯ್ಯನ ಪಾತ್ರ ಚಿಕ್ಕದಾಗಿದ್ದರೂ ನಾಟಕ ತುಂಬ ಆತನ ಮಸಲತ್ತು, ಚೆಲ್ಲಾಟ, ಸಿದ್ಲಿಂಗಪ್ಪನನ್ನು ಅಧ್ಯಕ್ಷನನ್ನಾಗಿ ಮಾಡಲು ತುಂಬ ಕಷ್ಟಪಟ್ಟು ನಾರದನಂತೆ ಎಲ್ಲರಿಂದಲೂ ಅವಮಾನಿತನಾಗುತ್ತಾನೆ. ಒಂದು ದಿನ ಸಿದ್ಲಿಂಗಪ್ಪನ ಮನೆಯಲ್ಲಿ ಆತ ಊರಿನ ಮುಖಂಡರೊಂದಿಗೆ ಕುಳಿತಿರುವಾಗ ಗಾಬರಿಯಿಂದ ದೌಡಾಯಿಸಿದ ಶಂಕ್ರಯ್ಯ

‘ಸಿದ್ಲಿಂಗಪ್ಪ್‌ನೊರೆ. ಬಾರಿ ಅನಾಹುತ ಆತ್ರಿ’ ಎಂದು ಹೇಳುತ್ತಾ ನಮ್ಮ ಗ್ರಾಮ ಪಂಚಾಯಿತಿ ಸೀಟು (ಸ್ಥಾನ) ಕೆಳಜಾತಿಗೆ ಮೀಸಲಾಗಿದೆ ಎಂದು ತಿಳಿಸಿದಾಗ ಸಿದ್ಲಿಂಗಪ್ಪ ‘ಏನೆ ಹೇಳು ಶಂಕ್ರಯ್ಯ ಈ ದೇಶಕ್ಕೆ ಒಳ್ಳೆಯ ಭವಿಷ್ಯ ಇಲ್ಲ. ಯಾಕಂದ್ರೆ ಎಲ್ಲಿ ನೋಡಿದ್ರ ಮೀಸಲಾತಿ ಅಲ್ಲ! ಅಧಿಕಾರ ಅಂದ್ರೆ ಸುಮ್ನೆ ಆದಾತಾ? ಅದ್ನ ಹೆಂಗ ನಡೆಸಬೇಕು ಅಂತ ಈಗಿನ್ ಜನಕ್ಕೇನ್ ತಿಳಿತೈತೆ? ಅದ್ಕೆ ನಮ್ಮ ವಂಶ ತಲತಲಾಂತರದಿಂದ ಆಳ್ಕಿ ಮಾಡಿಕೊಂಡ್ ಬಂದಿರೋದ. ನಾವು ಆಳೋಕ್ಕಾಗೆ ದೇವ್ರಿಂದ ಸೃಷ್ಠಿ ಆದೋರು ಅಂತಾದ್ರಾಗೆ ನಮೀಗೆ ಅಧಿಕಾರ ಇಲ್ಲ ಅಂದ್ರೆ ಅಧಿಕಾರುಕ್ಕೇ ನುಕ್ಸಾನಲ್ಲವೇ?’ ಎನ್ನುವ ಸಿದ್ಲಿಂಗಪ್ಪನ ಮಾತು ಹಿಂದುಳಿದವರ ಶೋಷಣೆ ಇನ್ನು ತಪ್ಪಿಲ್ಲ ಎಂದು ನಿರಾಶೆಯಾಗುತ್ತದೆ. ಅಧಿಕಾರವನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆನ್ನುವ ಉಪಾಯದಿಂದ ಶಂಕ್ರಯ್ಯ ದಲಿತ ಜಾತಿಯವರಿಗೆ ಬಹುಮತ ಕೊಡುವ ಎಲ್ಲ ಸದಸ್ಯರನ್ನು ಭೇಟಿಯಾಗಿ ಅದಿಕಾರದ ಗದ್ದುಗೆಯನ್ನು ಸಿದ್ಲಿಂಗಪ್ಪನಿಗೆ ಏರಿಸಬೇಕೆಂದು ಬಹಳ ಪ್ರಯತ್ನಿಸುತ್ತಾನೆ. ಹಾಗಾಗಿ ಮುಂದೆ ಶಂಕ್ರಯ್ಯ ಕೆಳಜಾತಿಯ ಸದಸ್ಯೆಯಾದ ಕೆಂಚವ್ವಳ ಗಂಡನಾದ ಗುರುಸಿದ್ದನನ್ನು ಕರೆದು ಹಣದ ಆಸೆ ತೋರಿಸಿ, ಕೆಂಚವ್ವಳಿಂದ ಬಿಳಿಯ ಹಾಳೆಯ ಮೇಲೆ ಸಹಿ ಹಾಕಿಸಿಕೊಳ್ಳಲು ಸೂಚಿಸುತ್ತಾನೆ. ಆಗ ಹಣದ ಆಸೆಗೆ ಸೋತ ಗುರುಸಿದ್ದ ಕೆಂಚವ್ವಳ ಹತ್ತಿರ ಬಂದು ಅವಳನ್ನು ಮನೋವೊಲಿಸುವ ಪ್ರಯತ್ನವನ್ನು, ಸಂಭಾಷಣೆಯನ್ನು ದಳವಾಯಿಯವರು ಸುಂದರವಾಗಿ ಚಿತ್ರಿಸಿದ್ದಾರೆ. ಗುರುಸಿದ್ಧ ‘ಲೇ ಸಾಹುಕಾರ ಸಿದ್ಲಿಂಗಪ್ಪರು ಕೊಟ್ಟಿರೋ ಹಣ ತಗೊಂಡು ಈ ಖಾಲಿ ಹಾಳೆ ಮ್ಯಾಲೆ ಒಂದು ಹೆಬ್ಬೆಟ್ಟು ಒತ್ತು’ ಎಂದಾಗ ಕೋಪದಿಂದ ಕೆಂಚವ್ವ ‘ಅವರತ್ರ ದುಡ್ಡು ತಿಂದು ಬಾಯಿ ಬಂದಂಗೆ ಮಾತಾಡಬೇಡ?’ ಎಂದು ಗಂಡನಿಗೆ ಧೈರ್ಯದಿಂದ ಉತ್ತರ ಕೊಡುತ್ತಾಳೆ. ಹಾಗೆ ಆ ಭೀಮಕ್ಕ, ಪೀರಣ್ಣ, ಕಾಳಕ್ಕ, ರಾಜಣ್ಣ ಸೇರಿ ತನ್ನನ್ನು ಅಧ್ಯಕ್ಷ ಸ್ಥಾನಕ್ಕೆ ಬಹುಮತ ಕೊಡುತ್ತೇವೆ ಅಂಥ ಹೇಳಿದ್ದಾರೆ ಎಂದು ಹೇಳಿ ಅವರಿಗೆ ಕೊಟ್ಟ ಮಾತು ಉಳಿಸಿಕೊಳ್ಳುವ ಇಂಗಿತವನ್ನು ವ್ಯಕ್ತಪಡಿಸುತ್ತಾಳೆ. ಹೀಗೆ ಗಂಡ ಹೆಂಡರ ನಡುವೆ ಮಾತಿನ ಚಕಮಕಿ ನಡೆದಾಗ ಕೆಂಚವ್ವ ಅಂಜದೆ ಗಂಡನಿಗೆ ಮರುತ್ತರ ಕೊಡುತ್ತಾಳೆ. ಇಲ್ಲಿ ಅವಳ ದಿಟ್ಟ ನಿರ್ಧಾರ, ಧೈರ್ಯವನ್ನು ಮೆಚ್ಚುವಂತದ್ದು. ಸಿದ್ಲಿಂಗಪ್ಪ ಕೊಟ್ಟ ಹಣವನ್ನು ವಾಪಸಕೊಡು ಎಂದು ಸ್ವಾಭಿಮಾನವನ್ನು ಮೆರೆಯುತ್ತಾಳೆ.

ಆದರೆ ಶಂಕ್ರಯ್ಯನ ಪ್ರಯತ್ನ ಅಷ್ಟಕ್ಕೆ ನಿಲ್ಲುವುದಿಲ್ಲ. ಮುಂದೆ ಕಮ್ಮಾರ ಪಾಪಣ್ಣನ ಹತ್ತಿರ ಹೋಗಿ ನಮಸ್ಕಾರ ಪಾಪಣ್ಣರೋಗಿ ಎಂದಾಗ ‘ಹೋ ಹೋ. ಶಂಕ್ರಯ್ಯನ್ನೋರು ನಮಸ್ಕಾರ ಸ್ವಾಮಿ, ನೀವು ಸುಮ್ನಿದ್ರೆ ಹೊಡೆದಂಗಾಗುತ್ತೇ ಇನ್ನು ನಿಮ್ಮ ನಮಸ್ಕಾರ ಅನ್ನೋದು ನನ್ನ ಸುತ್ತಿಗಿಗಿಂತ ದೊಡ್ಡೇಟು ಸ್ವಾಮಿ ಎಂದು ವಿನಯದಿಂದ ಮಾತಾಡಿಸುತ್ತಾನೆ. ಆಗ ಶಂಕ್ರಯ್ಯ ಹಿಂದುಳಿದ ಜಾತಿಗೆ ಅಧ್ಯಕ್ಷ ಸ್ಥಾನ ಮೀಸಲಾಗಿದೆ. ನೀವು ಅವರಿಗೆ ಬಹುಮತ ಕೊಡಬಾರದು ಎಂದು ಹೇಳಿದಾಗ ಪಾಪಣ್ಣ ಅಷ್ಟೆ ವಿನಯದಿಂದ ‘ಯಾರಾದರೇನು ಸ್ವಾಮಿ ನಮಗೆ ಕಬ್ಣಿಣ ಬಡಿದಿದ್ದರೆ ಹೊಟ್ಟೆ ತುಂಬಲ್ಲ. ಮತ ಹಾಕುವುದು ನನ್ನ ಧರ್ಮ’ ಎಂದು ಸ್ಪಷ್ಟವಾಗಿ ಹೇಳಿ ತನ್ನ ನಿರ್ಧಾರವನ್ನು ವ್ಯಕ್ತಪಡಿಸುತ್ತಾನೆ. ಆಗ ಬಂದ ಕೆಲಸಕ್ಕೆ ಸುಂಕವಿಲ್ಲವೆಂಬಂತೆ ಶಂಕ್ರಯ್ಯ ಮಗ್ಗದ ರಾಜಣ್ಣನ ಹತ್ತಿರ ಹೋಗಿ ತನ್ನ ಇತ್ಯಾರ್ಥವನ್ನು ತಿಳಿಸಿದಾಗ ರಾಜಣ್ಣ ನಿಷ್ಟುರದಿಂದ ‘ಶಂಕ್ರಯ್ಯರೇ, ಇದೆಲ್ಲಾ ಉಸಾಬರಿ ನಿಮಗ್ಯಾಕ್ರೆ! ನಿಮ್ಮ ಕೆಲ್ಸ ನೋಡ್ಕೋಗ್ರಿ ‘ಕೆಲಸ ಮಾಡದೇ ರಾಜಕೀಯ ಮಾಡೋದು ದೇಶದ್ರೋಹ’ ಎನ್ನುವ ಗಾಂಧೀಜಿಯವರ ಮಾತು ಕೇಳಿಲ್ಲವೇನು?’ ಎಂದು ತನ್ನ ನಿರ್ಧಾರವನ್ನು ಹೇಳಿ ಕಳುಹಿಸುತ್ತಾನೆ.

ಹೀಗೆ ಎಲ್ಲಾರಿಂದಲೂ ಅವಮಾನಿತನಾದ ಶಂಕ್ರಯ್ಯ ತನ್ನ ನಿಲುವು ಬದಲಾಯಿಸಿ ಉಪಯದಿಂದ ಮಣೆಗಾರ ಮಲ್ಲಣ್ಣ ಹತ್ತಿರ ಹೋಗಿ ‘ಮಲ್ಲಣ್ಣ ನೀನೇ ಗ್ರಾಮ ಪಂಚಾಯಿತ ಅಧ್ಯಕ್ಷ ಹಾಗೋದು’ ಎಂದು ಸಾಹುಕಾರ ಸಿದ್ಲಿಂಗಪ್ಪನವರು ತೀರ್ಮಾನ ಮಾಡಿದ್ದಾರೆ ಎಂದು ಆತನನ್ನು ಹುಬ್ಬುಸುವ ಕೆಲಸ ಮಾಡುತ್ತಾನೆ. ಆಗ ಮಲ್ಲಣ್ಣ ಅನಕ್ಷರಸ್ಥನಾಗಿದ್ದರೂ ಸ್ವಲ್ಪ ಕಾನೂನಿನ ಬಗ್ಗೆ ತಿಳಿದವನಾಗಿದ್ದ ಹಾಗಾಗಿ ‘ಶಂಕ್ರಯ್ಯೋನೋರೇ ಕಾನೂನು ಪ್ರಕಾರ ಯಾರಿಗೆ ಹಾಗಬೇಕೋ ಅವರಿಗೆ ಹಾಗುತ್ತೇ ನಮಗೆ ನಿಮಗೆ ಅದರೆಲ್ಲೇನಿದೆ’ ಎಂದು ಜಾಣತನದಿಂದ ಉತ್ತರಿಸುತ್ತಾನೆ. ಆಗ ಕೋಪದಿಂದ ಶಂಕ್ರಯ್ಯ ನೋಡ ಮಲ್ಲಣ್ಣ ನಿಮ್ಮನ್ನು ಸಾಕಿ ಸಲುಹಿದ ಸಿದ್ಲಿಂಗಪ್ಪನವರಿಗೆ ಮತ ಹಾಕ ಇಲ್ಲದಿದ್ದರೇ ಏನಾಗುತ್ತೇ ಎಂದು ಬೆದರಿಸಿದಾಗ ಮಲ್ಲಣ್ಣ ‘ರೀ ಸ್ವಾಮಿ ನಾವು ಅವರ ಮನೆ ಜೀತಮಾಡಿ ಅವರನ್ನು ಸಾಕಿದಿವಿ. ಏನೋ ಆ ಪುಣ್ಯಾತ್ಮ ಅಂಬೇಡ್ಕರ ಕಾನೂನ ಮಾಡಿದ್ರು, ಹಂಗಾಗಿ ಬುಟ್ಟೆವು, ಇಲ್ಲದಿದ್ದರೆ ನಮ್ಮ ಚರ್ಮ ಸುಲದಿಡೋರು’ ಎಂದು ಹೇಳುತ್ತಾ ಎಚ್ಚೆತ್ತುಕೊಂಡಿರುವ ದಲಿತನಾಗಿ ಮಲ್ಲಣ್ಣ ಗಮನ ಸೆಳೆಯುತ್ತಾನೆ.

ಇಷ್ಟಕ್ಕೂ ನಿಲ್ಲದೆ ಶಂಕ್ರಯ್ಯನ ಪಾದಯಾತ್ರೆ ಪಿಂಚಾರ್ರ ಪೀರಣ್ಣನ ಹತ್ತಿರ ಹೋಗಿ ನೀವು ನಮ್ಮ ಸಿದ್ಲಿಂಗಪ್ಪನಿಗೆ ಮತ ಹಾಕಿದರೆ ‘ಈ ಸಲದ ಕಂತ್ರಾಟು ನಿಂದೆ ಅಂತ ತಿಳ್ಕ’ ಎಂದು ಅವನ ಮನ ಹೋಲಿಸಲು ಯತ್ನಿಸಿದಾಗ ಪೀರಣ್ಣ ‘ಯಾ ಅಲ್ಲಾ ಹೋ ದೇವ್ರೆ! ಸ್ವಾಮಿ ಶಂಕ್ರಯ್ಯನೋರೆ ಮಾತಿಗೊಮ್ಮೆ ವೇದ, ವಚನ, ನೇಮ, ನುಡಿ ಅನ್ನೋ ಮಂದಿ ನೀವು ಇಂಥ ಅನಾಚಾರ ಮಾಡಿದ್ರೆ ಏನ್ ಸ್ವಾಮಿ. ನಿಮ್ಮಂತವರ ಕಡಿಕ ನಾನು ವಾಲಿದ್ರೆ ಆ ಅಲ್ಲಾ ಮೆಚ್ಚತಾನ!’ ಎಂದು ನಿಷ್ಟುರವಾಗಿ ಹೇಳಿ ತಮ್ಮ ಮತ ಮೀಸಲಾತಿ ಯಾರಿಗೆ ಇದೆ ಅವರಿಗೆ ಬೆಂಬಲ ಕೊಡುವುದಾಗಿ ಹೇಳುತ್ತಾನೆ.

ಕೊನೆಗೆ ಸಿದ್ಲಿಂಗಪ್ಪನನ್ನು ಅಧ್ಯಕ್ಷ ಮಾಡುವ ಶಂಕ್ರಯ್ಯನ ಎಲ್ಲಾ ಪ್ರಯತ್ನಗಳು ಮುಗಿದವು. ಕಾನೂನಿನ ಪ್ರಕಾರ ಊರಿನ ಎಲ್ಲಾ ಸದಸ್ಯರು ಕೂಡಿ ಕೆಂಚವ್ವಳವನ್ನು ಚುನಾಯಿತಸುತ್ತಾರೆ. ಇಲ್ಲಿ ಸಂವಿಧಾನದ ನಿಯಮಗಳಿಗೆ ಜಯವಿದೆ ಎಂಬುದನ್ನು ದಳವಾಯಿಯವರು ತೋರಿಸಿಕೊಟ್ಟು ಇಲ್ಲಿಯ ಪಾತ್ರಗಳ ಸ್ವಾಭಿಮಾನ, ಘನತೆಯನ್ನು ಎತ್ತಿ ಹಿಡಿದಿದ್ದಾರೆ. ಮುಂದೆ ಗ್ರಾಮ ಪಂಚಾಯತ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಅಲ್ಲಿನ ಸೆಕ್ರೆಟ್ರಿ (ಕಾರ್ಯದರ್ಶಿ) ಹಾಗೂ ಎಲ್ಲಾ ಸದಸ್ಯರ ಸಮ್ಮುಖದಲ್ಲಿ ಆ ಊರಿನ ಕಾಮಗಾರಿಯ ಕುರಿತು ಸಭೆ ಸೇರುತ್ತಾರೆ. ಅಲ್ಲಿ ಸಹ ಸಿದ್ಲಿಂಗಪ್ಪ ಕೆಂಚವ್ವ ಅನಕ್ಷರಸ್ಥೆ ಅವಳಿಗೆ ಏನೂ ಗೊತ್ತಿಲ್ಲ? ಯಾವ ರೀತಿ ಪರಿಶೀಲನೆ ಮಾಡುತ್ತಾರೆ ಇದಕ್ಕೆ ನಾವು ಒಪ್ಪುವುದಿಲ್ಲ ಎಂದು ಸಭೆಯಲ್ಲಿ ಗದ್ದಲ ಹೇಳಿಸುತ್ತಾನೆ. ಎಲ್ಲ ಸದಸ್ಯರು ಕೆಂಚವ್ವಳ ಪರವಾಗಿ ನಿಂತು ತಮಿಳುನಾಡಿನ ಮುಖ್ಯಮಂತ್ರಿ ಕಾಮರಾಜ, ಹೈದರಾಲಿ ಇತ್ಯಾದಿ ಅನಕ್ಷರಸ್ಥರು ಆಳ್ವಿಕೆ ಮಾಡಿದ್ದನ್ನು ನೆನಪಿಸಿ ಅಧಿಕಾರ ಮಾಡುವುದಕ್ಕೆ ‘ಬರಹ ಮುಖ್ಯ ಅಲ್ಲ. ಒಳ್ಳೆಯ ಆಡಳಿತ ಮುಖ್ಯ’ ಎಂದು ಸಿದ್ಲಿಂಗಪ್ಪನ ಬಾಯಿ ಮುಚ್ಚಿಸುತ್ತಾರೆ. ಇಲ್ಲಿ ಅನಕ್ಷರಸ್ಥರಿಗೆ ಇರುವ ಸಾಮರ್ಥ್ಯವನ್ನು ದಳವಾಯಿಯವರು ಸಾಬೀತುಪಡಿಸಿದ್ದಾರೆ.

ಎಲ್ಲಾರು ಕೆಂಚವ್ವಳ ಬೆಂಬಲಕ್ಕೆ ನಿಂತು ಒಮ್ಮತದಿಂದ ಕಾಮಗಾರಿ ಕೆಲಸ ಮಾಡುತ್ತಿರುವಾಗ ಎಂದಿನಂತೆ ಶಂಕ್ರಯ್ಯ ಅಲ್ಲಿ ನೆರೆದ ಎಲ್ಲರಿಗೆ ಕೆಂಚವ್ವ ಮೂಡಲಗಿರಿಯಪ್ಪನಿಗೆ ಕಾಮಗಾರಿ ಕಂತ್ರಾಟು ಕೊಟ್ಟು ೨೫ ಸಾವಿರ ಲಂಚ ತೆಗೆದುಕೊಂಡಿದ್ದಾಳೆ ಎಂದು ಗಾಳಿ ಸುದ್ದಿ ಹೇಳುತ್ತಾನೆ. ಆಗ ಎಲ್ಲರು ಗುಸುಗುಸು ಮಾತು ಹಾಡುತ್ತಿರುವಾಗ ಅಷ್ಟರಲ್ಲೆ ಕೆಂಚವ್ವಳ ಗಂಡ ಗುರುಸಿದ್ದ ನಡೆದ ವಿಷಯವನ್ನು ಹೇಳಿ ಶಂಕ್ರಯ್ಯನ ಹುಸಿ ಮಾತನ್ನು ಶಮನ ಮಾಡುತ್ತಾನೆ. ಆಗ ವಿಷಯ ತಿಳಿದ ಕೆಂಚವ್ವ ಬೇಸರಗೊಂಡು ತನ್ನ ರಾಜೀನಾಮೆ ಕೊಡುವ ಇಂಗಿತವನ್ನು ವ್ಯಕ್ತಪಡಿಸುತ್ತಾಳೆ. ಆಗ ಎಲ್ಲ ಸದಸ್ಯರು ಮತ್ತೊಮ್ಮೆ ಕೆಂಚವ್ವಳಿಗೆ ಧೈರ್ಯ ತುಂಬಿ ಸದಾ ತಮ್ಮ ಬೆಂಬಲವನ್ನು ಸೂಚಿಸಿ ಜೈಕಾರ ಹಾಕುತ್ತ ಮುಂದೆ ಸಾಗುತ್ತಾರೆ. ‘ಜಾತಿ ಮಾಡಬೇಡಿರಿ ಅಧಿಕಾರದೊಳಗ’ ಎಂಬ ಹಾಡಿನ ಮುಖಾಂತರ ನಾಟಕ ಮುಕ್ತಾಯವಾಗುತ್ತದೆ.

ದಳವಾಯಿ ಒಬ್ಬ ಸಮಾಜಮುಖಿಯಾಗಿದ್ದು ಈ ಆಧುನಿಕ ಸಮಾಜವನ್ನು ತೀರ ಹತ್ತಿರದಿಂದ ಕಂಡವರು ರಾಜಕೀಯ ವೈಪರಿತ್ಯಗಳನ್ನು ಅನುಭವಿಸಿದವರು. ಮಾನವ ಸಂಘಜೀವಿ, ಸಮಾಜಮುಖಿಯಾಗಿದ್ದು ಈ ಆಧುನಿಕ ಜಗತ್ತಿನಲ್ಲಿ ರಾಜಕೀಯದ ಅರಿವು ಪ್ರತಿಯೊಬ್ಬ ಪ್ರಜೆಗೂ ಅವಶ್ಯಕವಾಗಿದ್ದು, ಹಾಗಾಗಿ ಇದರ ಪರಿಕಲ್ಪನೆಯನ್ನು ಸಾಮಾನ್ಯರಿಂದ ಅಸಾಮಾನ್ಯರವರಿಗೆ ತಮ್ಮ ನಾಟಕದುದ್ದಕ್ಕೂ ಅನಕ್ಷರಸ್ಥ ಪಾತ್ರಗಳೊಂದಿಗೆ ಸಮಾಜಕ್ಕೆ ತಲುಪಿಸಲು ಹೊರಟ ದಳವಾಯಿಯವರ ಈ ಪ್ರಯತ್ನ

ಶ್ಲಾಘನೀಯವಾದುದ್ದು. "ಜನರಿಂದ ಜನರಿಗಾಗಿ ಜನರಿಗೋಸ್ಕರ ಜನರೇ ನಡೆಸುವ ಸರ್ಕಾರವೇ ಪ್ರಜಾಪ್ರಭುತ್ವ" ಎಂಬ ಅಬ್ರಾಹಂ ಲಿಂಕನ್ನರ ಮಾತನ್ನು ಮತ್ತೊಮ್ಮೆ ನೆನೆಪಿಸಿದ್ದಾರೆ. ಪ್ರಜೆಗಳು ತಮ್ಮನ್ನಾಳುವ ನಾಯಕರನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ, ಸಮಾನತೆ, ಮತದಾನ ಹಕ್ಕು ಹಾಗೂ ಅದರ ಮಹತ್ವಗಳ ಅರಿವು ನಾಟಕದೂದ್ದಕ್ಕೂ ಮೂಡಿಬಂದಿವೆ. ಅಲ್ಲಲ್ಲಿ ಮೂಡಿಬರುವ ಹಾಡುಗಳು ಕಾಯಕ, ಸ್ವಾಮಿನಿಷ್ಠೆ, ಸ್ವಾಭಿಮಾನಗಳಂತ ಮಾನವೀಯ ಮೌಲ್ಯಗಳನ್ನು ಎಚ್ಚರಿಸುತ್ತವೆ. ಮುಖ್ಯವಾಗಿ ರಾಜ್ಯಭಾರ ಮಾಡುವುದಕ್ಕೆ ಮೇಲು–ಕೀಳು, ಬಡವ–ಶ್ರೀಮಂತಿಕೆಗಳು ಅಡ್ಡಿ ಬಾರದು ಸಂವಿಧಾನದ ಆಶಯದಂತೆ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ನೆಲೆಯಲ್ಲಿ ಈ ನಾಟಕ ಅರ್ಥಪೂರ್ಣವಾದ ಸಂದೇಶ ನೀಡಿರುವಂತದ್ದು ಅಮೋಘವಾಗಿದೆ. ಹೀಗಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ರಾಜಪ್ಪ ದಳವಾಯಿ ಒಬ್ಬ ಶ್ರೇಷ್ಠ ನಾಟಕಕಾರರೆಂದು ಹಾಗೂ ದಲಿತಪರ ಕಾಳಜಿಯುಳ್ಳವರಾಗಿ ಗಮನ ಸೆಳೆದಿದ್ದಾರೆ.

**ಆಕಾರ ಗ್ರಂಥಗಳು:**


1. ಜಾತಿ ಮಾಡ ಬೇಡಿರಿ ಅಧಿಕಾರದೊಳಗ – ರಾಜಪ್ಪ ದಳವಾಯಿ
2. ಹೊಸಗನ್ನಡ ನಾಟಕಕಾರರು – ಡಾ.ಎಸ್.ಎಸ್.ಭಗವತಿ ಡಾ.ಎಚ್.ಎಸ್.ಮೇಲಿನಮನಿ
3. ದಳವಾಯಿ ಡಜನ್ ನಾಟಕಗಳು – ರಾಜಪ್ಪ ದಳವಾಯಿ
4. ಕನ್ನಡದಲ್ಲಿ ದಲಿತ ಸಾಹಿತ್ಯ. – ಡಾ.ವಿ.ಮುನಿವೆಂಕಟಪ್ಪ